# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 132 |
| **ಮಾನ್ಯ ಸದಸ್ಯರ ಹೆಸರು** | : ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | : 19-12-2022 |
| **ಉತ್ತರಿಸುವ ಸಚಿವರು** | : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ಸದರಿ ಕ್ಷೇತ್ರದ ಮೂಲಕ ಆರ್ಥಿಕ ವಹಿವಾಟು ಹೆಚ್ಚಿಸುವ ಮೂಲಕ ಅಭಿವೃದ್ಧಿ ಕಾಣಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು; | ಕೊಡಗು ಜಿಲ್ಲೆಯನ್ನೊಳಗೊಂಡಂತೆ, ರಾಜ್ಯದ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ತೆಗೆದುಕೊಂಡಿರುವ ಕ್ರಮದ ವಿವರಗಳು ಈ ಕೆಳಕಂಡಂತಿದೆ.<br><br>• ಕರ್ನಾಟಕ ಪ್ರವಾಸೋದ್ಯಮ ನೀತಿ 2020-26ರ ಅಡಿಯಲ್ಲಿ ಕೊಡಗು ಜಿಲ್ಲೆಯನ್ನು ಆದ್ಯತಾ ಪ್ರವಾಸಿ ತಾಣವನ್ನಾಗಿ ಗುರುತಿಸಲಾಗಿದೆ.<br>• ಸದರಿ ನೀತಿಯಡಿ ಗುರುತಿಸಿರುವ ಈ ಕೆಳಕಂಡ 26 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗೀ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>1. ಸಾಹಸ ಪ್ರವಾಸೋದ್ಯಮ ಯೋಜನೆ<br>2. ಕೃಷಿ ಪ್ರವಾಸೋದ್ಯಮ ಯೋಜನೆ<br>3. ಮನರಂಜನಾ ಪಾರ್ಕ್<br>4. ಕ್ಯಾರವಾನ್ ಪಾರ್ಕ್ ಯೋಜನೆ<br>5. ಕ್ಯಾರವಾನ್ ಪ್ರವಾಸೋದ್ಯಮ ಯೋಜನೆ<br>6. ಸಮಾವೇಶ ಕೇಂದ್ರ<br>7. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ<br>8. ಸಾಂಸ್ಕೃತಿಕ ಗ್ರಾಮ<br>9. ಪರಿಸರ ಪ್ರವಾಸೋದ್ಯಮ ಯೋಜನೆ.<br>10. ಪಾರಂಪರಿಕ ಹೋಟೆಲ್<br>11. ಪಾರಂಪರಿಕ ಪ್ರವಾಸೋದ್ಯಮ ಯೋಜನೆ<br>12. ಪಾರಂಪರಿಕ ನಡಿಗೆ<br>13. ಹೋಂ ಸ್ಟೇ<br>14. ಹೋಟೆಲ್ ಯೋಜನೆ (ಬಜೆಟ್)<br>15. ಹೋಟೆಲ್ ಯೋಜನೆ (ಪ್ರೀಮಿಯಂ)<br>16. ಹೌಸ್‌ಬೋಟ್ ಯೋಜನೆ<br>17. ವಸ್ತು ಸಂಗ್ರಹಾಲಯಗಳು ಮತ್ತು ಗ್ಯಾಲರಿಗಳು<br>18. ರೋಪ್ ವೇ<br>19. ಸುರಕ್ಷತೆ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ<br>20. ಧ್ವನಿ ಮತ್ತು ಬೆಳಕಿನ ದರ್ಶನ<br>21. ಟೆಂಟ್ ವಸತಿ ಸೌಕರ್ಯ<br>22. ಥೀಮ್ ಪಾರ್ಕ್<br>23. ಪ್ರವಾಸಿ ವಿವರಣಾ ಕೇಂದ್ರ<br>24. ಪ್ರವಾಸಿ ಲಕ್ಸುರಿ ಕೋಚ್<br>25. ಸ್ವಾಸ್ಥ್ಯ ಕೇಂದ್ರ<br>26. ರಸ್ತೆಬದಿ ಸೌಲಭ್ಯಗಳು. |
| ಆ) | ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವ ಮಡಿಕೇರಿ ಪ್ರವಾಸೋದ್ಯಮ ಇಲಾಖೆಯನ್ನು ಬಲಪಡಿಸಲು ಇರುವ ಸರ್ಕಾರದ ಯೋಜನೆಗಳು ಯಾವುವು; | ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಪ್ರವಾಸೋದ್ಯಮವನ್ನು ಬಲಪಡಿಸಲು ಕೈಗೊಂಡಿರುವ ಪ್ರವಾಸಿ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. |

| | | |
|---|---|---|
| ಇ) | ಬಿಹಾರ ಹಾಗೂ ಇನ್ನಿತರ ರಾಜ್ಯಗಳಲ್ಲಿ ರಮಣೀಯ ಪ್ರದೇಶಗಳನ್ನು ವೀಕ್ಷಿಸಲು ಶಿಖರದ ಎತ್ತರದ ತುದಿಯಲ್ಲಿ ಅಳವಡಿಸಲಾಗಿರುವ ಗಾಜಿನ ಸೇತುವೆ/ವ್ಯೂ ಪಾಯಿಂಟ್ ಅನ್ನು ಅಳವಡಿಸಿದಂತೆ ಕೊಡಗು ಸೇರಿದಂತೆ ರಾಜ್ಯದ ಪ್ರವಾಸಿ ತಾಣಗಳಲ್ಲಿ ನಿರ್ಮಾಣ ಮಾಡುವ ಯೋಚನೆ ಸರ್ಕಾರದ ಮುಂದೆ ಇದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಎಲ್ಲೆಲ್ಲಿ ಈ ಗಾಜಿನ ಸೇತುವೆ/ವ್ಯೂ ಪಾಯಿಂಟ್ ಅನ್ನು ಅಳವಡಿಸಲು ನಿರ್ಧರಿಸಲಾಗಿದೆ? (ವಿವರ ನೀಡುವುದು) | ಈ ರೀತಿಯ ಪ್ರಸ್ತಾವನೆ ಇಲಾಖೆಗೆ ಸ್ವೀಕೃತವಾಗಿರುವುದಿಲ್ಲ. |

**TOR 313 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

# ಅನುಬಂಧ

## ಬಂಡವಾಳ ವೆಚ್ಚಗಳ ಅಡಿ ಹಾಗೂ ಕೆಟಿವಿಜಿ ಅಡಿಯಲ್ಲಿ ಕೊಡಗು ಜಿಲ್ಲೆಯ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ | ಷರಾ |
|---|---|---|---|---|---|---|
| | ಕೊಡಗು ಜಿಲ್ಲೆ | | | | | |
| 1 | ಮಡಿಕೇರಿಯ ರಾಜಾಸೀಟ್ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ. (2014-15) (ಬಂಡವಾಳ ವೆಚ್ಚಗಳು) | 2014-15 | 455.00 | ಲೋಕೋಪಯೋಗಿ ಇಲಾಖೆ | 371.25 | ಕಾಮಗಾರಿ ಪೂರ್ಣಗೊಂಡಿದೆ. |
| 2 | ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ (2008-09) (ಬಂಡವಾಳ ವೆಚ್ಚಗಳು) | 2008-09 | 330.45 | ಲೋಕೋಪಯೋಗಿ ಇಲಾಖೆ | 282.54 | ಕಾಮಗಾರಿ ಪೂರ್ಣಗೊಂಡಿದೆ. |
| 3 | ಕೊಡಗು ಜಿಲ್ಲೆಯ ಕೆಂಪುರಾಶಿ ಮೊಟ್ಟೆಯಿಂದ ಮಂಟಕಲ್ ಶಾಲೆವರೆಗೆ 2.00 ಕಿ.ಮೀ ರಸ್ತೆ ಅಭಿವೃದ್ಧಿ (ತಲಕಾವೇರಿ ಬದಲಿ ಸಂಪರ್ಕ ರಸ್ತೆ) (2017-18) | 2017-18 | 300.00 | ಲೋಕೋಪಯೋಗಿ ಇಲಾಖೆ | 225.00 | ಕಾಮಗಾರಿ ಪೂರ್ಣಗೊಂಡಿದೆ. |
| 4 | ಮಡಿಕೇರಿಯಲ್ಲಿರುವ ಶ್ರೀ ಓಂಕಾರೇಶ್ವರ ದೇವಸ್ಥಾನದ ಬಳಿ ಶೌಚಾಲಯ ಬಟ್ಟೆ ಬದಲಿಸುವ ಕೊಠಡಿ ನಿರ್ಮಾಣ (2018-19) | 2018-19 | 36.60 | ಕೆಆರ್ ಐಡಿಎಲ್ | 27.45 | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. |
| 5 | ಮಡಿಕೇರಿ ತಾಲ್ಲೂಕು ನಾಲ್ಕುನಾಡು ಅರಮನೆ ಸಂಪರ್ಕ ರಸ್ತೆ ಅಭಿವೃದ್ಧಿ (ಸಿ.ಸಿ.ರಸ್ತೆ) (2018-19) | 2018-19 | 300.00 | ಲೋಕೋಪಯೋಗಿ ಇಲಾಖೆ | 275.00 | ಕಾಮಗಾರಿ ಪೂರ್ಣಗೊಂಡಿದೆ. |
| 6 | ಸೋಮವಾರಪೇಟೆ ತಾಲ್ಲೂಕು, ಮಲ್ಲಳ್ಳಿ ಜಲಪಾತ ಪ್ರದೇಶದಲ್ಲಿ ಬಾಕಿ ಇರುವ ಮೆಟ್ಟಿಲುಗಳ ನಿರ್ಮಾಣ, ರೈಲಿಂಗ್ಸ್, ಪಾರ್ಕಿಂಗ್, ಮಳಿಗೆ ಮುಂತಾದ ಸೌಲಭ್ಯಗಳ ನಿರ್ಮಾಣ (2016-17) | 2016-17 | 192.92 | ಕೆಆರ್ ಐಡಿಎಲ್ | 160.00 | ವಾಚ್‌ಟವರ್ ಮತ್ತು ಇಂಟರ್ ಲಾಕ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| 7 | ಕೊಡಗು ಜಿಲ್ಲೆಯ ದುಬಾರೆ ಬಳಿ ಕಾವೇರಿ ನದಿ ತೀರದ ಬಳಿ ಪಾರ್ಕಿಂಗ್ ಸೌಲಭ್ಯ ಅಭಿವೃದ್ಧಿ (2016-17) | 2016-17 | 102.00 | ಲೋಕೋಪಯೋಗಿ ಇಲಾಖೆ | 76.50 | ಕಾಮಗಾರಿ ಪೂರ್ಣಗೊಂಡಿದೆ. |
| 8 | ಸೋಮವಾರಪೇಟೆ ತಾಲ್ಲೂಕು, ಶನಿವಾರ ಸಂತೆ ಹೋಬಳಿ, ತಪೋವನ ಮನೆಹಳ್ಳಿ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಿಂದ ಅಜ್ಜಯ್ಯ ವೀರಭದ್ರ ಮಠಕ್ಕೆ ಹೋಗುವ ರಸ್ತೆ ಅಭಿವೃದ್ಧಿ (2019-20) | 2019-20 | 100.00 | ಲೋಕೋಪಯೋಗಿ ಇಲಾಖೆ | 33.00 | ಕಾಮಗಾರಿ ಪ್ರಗತಿಯಲ್ಲಿದೆ. |
| 9 | ಮಡಿಕೇರಿಯ ರಾಜಾಸೀಟಿಗೆ ತೆರಳುವ ರಸ್ತೆಗೆ ಪಾತ್‌ವೇ, ರೈಲಿಂಗ್ಸ್ ನಿರ್ಮಾಣ ಕಾಮಗಾರಿ. (ಕೆ.ಟಿ.ವಿ.ಜಿ 2019-20) | 2019-20 | 57.00 | ಲೋಕೋಪಯೋಗಿ ಇಲಾಖೆ | 28.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 10 | ಮಡಿಕೇರಿಯ ರಾಜಾಸೀಟು ಬಳಿ ಕೂರ್ಗ್ ವಿಲೇಜ್/ ಕೊಡಗು ಶಾಪಿಂಗ್ ಕೇಂದ್ರ ಕಾಮಗಾರಿ ನಿರ್ಮಾಣ (ಕೆ.ಟಿ.ವಿ.ಜಿ 2019-20) | 2019-20 | 98.50 | ನಿರ್ಮಿತಿ ಕೇಂದ್ರ | 98.50 | ಕಾಮಗಾರಿ ಪೂರ್ಣಗೊಂಡಿದೆ. |

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ | ಷರಾ |
|---|---|---|---|---|---|---|
| 11 | ಕೊಡಗು ಜಿಲ್ಲೆಯ ಅಬ್ಬಿ ಫಾಲ್ಸ್ ಪ್ರದೇಶದಲ್ಲಿ 300 ಮೀ. ಸಿ.ಸಿ. ರಸ್ತೆ, ಪಾರ್ಕಿಂಗ್ ಸೌಲಭ್ಯ ಹಾಗೂ ಮಳೆನೀರು ಚರಂಡಿ ನಿರ್ಮಾಣ (ಕೆ.ಟಿ.ವಿ.ಜಿ. 2019-20) | 2019-20 | 175.00 | ಕೆಆರ್ ಐಡಿಎಲ್ | 130.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 12 | ಕೊಡಗು ಜಿಲ್ಲೆಯ ಮಾಂದಲಪಟ್ಟಿ ಗ್ರಾಮದ ಕಾಲೂರು ಕರೇನ ಮನೆಯಿಂದ ಮಾಂದಲ್ ಪಟ್ಟಿಗೆ ಹೋಗುವ ಸಿ.ಸಿ. ರಸ್ತೆ ಕಾಮಗಾರಿ (2019-20) | 2019-20 | 199.00 | ಕೆಆರ್ ಐಡಿಎಲ್ | 149.00 | ಕಾಮಗಾರಿ ಪೂರ್ಣಗೊಂಡಿದೆ. |
| 13 | ಮಡಿಕೇರಿಯ ಶ್ರೀ ಓಂಕಾರೇಶ್ವರ ದೇವಸ್ಥಾನದ ಬಳಿ 100 ಮೀಟರ್ ಸಿ.ಸಿ. ರಸ್ತೆ ನಿರ್ಮಾಣ ಮತ್ತು ಪಾರ್ಕಿಂಗ್ ಲಾಟ್ ಅಭಿವೃದ್ಧಿ. (2019–20)ಕೆಟಿವಿಜಿ | 2019-20 | 40.80 | ಕೆಆರ್ ಐಡಿಎಲ್ | 20.00 | ಕಾಮಗಾರಿ ಪ್ರಗತಿಯಲ್ಲಿದೆ. |
| 14 | ಕೊಡಗು ಜಿಲ್ಲೆಯ ವಿರಾಜಪೇಟೆಯ ಅಯ್ಯಪ್ಪ ಬೆಟ್ಟದಲ್ಲಿ ಪಾರ್ಕಿಂಗ್, ಬಟರ್ ಫ್ಲೈ ಪಾರ್ಕ್ ಹಾಗೂ ಇತರೆ ಮೂಲಭೂತ ಸೌಕರ್ಯ ಕಾಮಗಾರಿ. (2019–20 ಕೆಟಿವಿಜಿ) | 2019-20 | 199.00 | ಕೆಆರ್ ಐಡಿಎಲ್ | 149.00 | ಬದಲಿ ಕಾಮಗಾರಿಗೆ ಅಂದಾಜುಪಟ್ಟಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಅಂದಾಜುಪಟ್ಟಿ ನಿರೀಕ್ಷಿಸಲಾಗುತ್ತಿದೆ |
| 15 | ಕುಶಾಲನಗರದ ದುಬಾರೆಯಲ್ಲಿ ಕಾವೇರಿ ನದಿ ಬಳಿ ಸೋಪಾನಕಟ್ಟೆ ಹಾಗೂ ಜಟ್ಟಿ ನಿರ್ಮಾಣ. (2019-20 ಕೆಟಿವಿಜಿ) | 2019-20 | 138.65 | ಲೋಕೋಪಯೋಗಿ ಇಲಾಖೆ | 123.53 | ಕಾಮಗಾರಿ ಪೂರ್ಣಗೊಂಡಿದೆ. |
| 16 | ಕುಶಾಲನಗರದ ದುಬಾರೆಯಲ್ಲಿ ಪಾರ್ಕಿಂಗ್ ಸೌಲಭ್ಯ ನಿರ್ಮಾಣ (ಭಾಗ-2) (2019-20 ಕೆಟಿವಿಜಿ) | 2019-20 | 130.00 | ಲೋಕೋಪಯೋಗಿ ಇಲಾಖೆ | 103.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| | ಒಟ್ಟು | | **2854.92** | | **2251.77** | |